ಶ್ರೀ ಆರ್. ಎಸ್. ನಾಡೋನಿ.—ಈ ಚಿಕ್ಕೋಡಿ ಬ್ರಾಂಚ್ ಕೆನಾಲ್ ಕೆಲಸ ಇನ್ನೂ ಪ್ರಾರಂಭ ವಾಗಿಲ್ಲ. ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಈಗಾಗಲೇ ಈ ಚಿಕ್ಕೋಡಿ ಬ್ರಾಂಚ್ ಕೆನಾಲ್ ಕೆಲಸವನ್ನು ತ್ವರಿತಗತಿಯಿಂದ ಪ್ರಾರಂಭ ಮಾಡಿದ್ದೇವೆ.

ಶ್ರೀ ವಿ. ವಿ. ಪತ್ತಾರ್.—ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವಾಗಿ ಲೈನಿಂಗ್ ಹಾಕುವ ಕೆಲಸ ಪ್ರಾರಂಭ ಮಾಡಿದ್ದೇವೆಂದು ಹೇಳಿದರು. ಆದರೆ ನನ್ನ ಪ್ರಶ್ನೆ ಅದಲ್ಲ. ಅಲ್ಲಿ ಈಗ ಹಗಲುರಾತ್ರಿ ನೀರು ಸರಿಯಾಗಿ ಉಪಯೋಗವಾಗದೆ ಹೊಳೆ ಸೇರುತ್ತಿದೆ. ಆದಕಾರಣ ನೀರು ವ್ಯರ್ಥವಾಗಿ ಪರಿದು ಹೋಗುವುದನ್ನು ತಪ್ಪಿಸಲು ಕೆನಾಲ್ ಪಕ್ಕದಲ್ಲಿಯೇ ಯೋಗ್ಯ ಸ್ಥಳಗಳಲ್ಲಿ ಕೆರೆಗಳನ್ನು ಕಟ್ಟಿಸಿ ನೀರನ್ನು ಸಂಗ್ರಹ ಮಾಡುತ್ತೀರಾ ಎಂಬ ಬಗ್ಗೆ ನನಗೆ ಉತ್ತರಬೇಕಂ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಸದಸ್ಯರು ಕೆರೆಗಳನ್ನು ಕಟ್ಟಿಸುವುದರ ಮೂಲಕ ಒಂದು ವ್ಯವಸ್ಥಿತ ರೀತಿಯಲ್ಲಿ ನೀರನ್ನು ಉಪಯೋಗಿಸಲು ವ್ಯವಸ್ಥೆ ಮಾಡುತ್ತೀರಾ ಎಂದು ಕೇಳುತ್ತಿದ್ದಾರೆ. ನಮ್ಮ ನೀರಾವರಿ ಇಲಾಖೆಯವರು ಕೆನಾಲ್ ಮೂಲಕ ನೀರನ್ನು ರೈತರಿಗೆ ಕೊಡಲು ವ್ಯವಸ್ಥೆ ಮಾಡಿ ದ್ದಾರೆ. ಈ ನೀರನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ರೈತಬಾಂಧವರ ಸಹಕಾರವಿಲ್ಲದಿದ್ದರೆ ನಾವು ನೀರನ್ನು ಸರಿಯಾಗಿ ಒದಗಿಸುವುದು ಕಷ್ಟವಾಗುತ್ತದೆ. ಆದರೂ ಸಹ ಮಾನ್ಯ ಸದಸ್ಯರು ವ್ಯಕ್ತ ಪಡಿಸಿದ ವಿಷಯವನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ರೈತರಿಗೆ ಒಳ್ಳೆಯ ರೀತಿಯಿಂದ ನೀರನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತದೆ.

ಶ್ರೀ ಆರ್. ಎಸ್. ನಾಡೋನಿ.—ಆ ಭಾಗದ ರೈತರೆಲ್ಲರೂ ಈ ಬಗ್ಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಒಂದು ಮನವಿ ಸಲ್ಲಿಸಿದ ಮೇಲೆ, ಮುಖ್ಯಮಂತ್ರಿಗಳು ಶ್ರೀ ಬಾಳಿಕುಂದರಗಿ ಅವರ ನೇತೃತ್ವದಲ್ಲಿ ಒಂದು ನಿಯೋಗವನ್ನು ಎಲ್ಲವನ್ನೂ ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಲು ನೇಮಕ ಮಾಡಿದ್ದಾರೆ. ಈ ವಿಚಾರ ಪತ್ರಿಕೆಗಳಲ್ಲಿಯೂ ಬಂದಿದೆ. ಅಲ್ಲಿನ ಅನೇಕ ಹಳ್ಳಿಗಳು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಕಾರಣದಿಂದ ಈ ಒಂದು ನಿಯೋಗದಲ್ಲಿ ಕೆಲಸ ಮಾಡಲು ನನ್ನನ್ನೂ ಸಹ ಹಾಕಿದರೆ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಸದಸ್ಯರು ಈ ನಿಯೋಗದಲ್ಲಿರುವುದಕ್ಕಿಂತಲೂ ಮುಖ್ಯ ವಾಗಿ, ಅವರು ಯಾವಾಗ ಬೇಕಾದರೂ ನಮ್ಮ ಸರ್ಕಾರದ ಹತ್ತಿರ ಈ ವಿಷಯದ ಬಗ್ಗೆ ಮನವಿ ಸಲ್ಲಿಸಿದರೆ, ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತದೆ. ಆದಕಾರಣ ಈ ಬಗ್ಗೆ ಮಾನ್ಯ ಸದಸ್ಯರು ಶಂಕೆ ಪಡಬೇಕಾಗಿಲ್ಲ.

Employment to people whose lands were acquired for N.G.E.F.

409 SRI B. V. RAMACHANDRA REDDY.—(Vartur).—Will the Chief Minister be pleased to state.

(a) whether it is a fact that several hundred acres of land has been acquired for installation and expansion of N.G.E.F. on old Madras Road in Bangalore South Taluk ;

(b) whether it is a fact that HAL, Bangalore Complex is giving preference in the appointment of lower cadres by reserving some percentage of posts for the children of the public who have lost their land for the HAL factory ;

(c) the difficulty in not reserving a few posts at lower cadres in NGEF factory to the children of the public who have lost their lands for expansion of NGEF on old Madras Road in Bangalore South Taluk ?

SRI R. GUNDU RAO (Chief Minister).—

(a) Yes, about 221 acres of land has been acquired.

(b) One dependent son/daughter of the person whose land has been acquired by the HAL will be considered for employment for lower cadres in preference to outsiders without preference to employment exchange on compassionate grounds subject to condition that the candidates should have registered their names in the local employment exchange. The appointment of such persons will be subject to assessment of their suitability by the Selection Committee as in the case of other candidates.

(c) Reservations can be made only in respect of candidates belonging to SC/ST/BC/BCT etc., as well as the physically handicapped but not in respect of those whose lands have been acquired, as it would not be legally valid.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಈಗ ಕೇಂದ್ರಸರ್ಕಾರದ ಕಾರ್ಖಾನೆಗಳಲ್ಲಿ ನಮ್ಮ ರಾಜ್ಯದ ರೈತರೇನಾದರೂ ಆ ಕಾರ್ಖಾನೆಗಳಿಗಾಗಿ ತಮ್ಮ ಜಮೀನನ್ನು ಕಳೆದುಕೊಂಡಿದ್ದರೆ, ಅಂತಹವರ ಮಂಕ್ಕಳಿಗೆ ಕೆಲಸ ಕೊಡಲು ಸಹಾನುಭೂತಿಯಿಂದ ಒಪ್ಪಿಕೊಂಡಿದ್ದಾರೆ. ಅದೇ ಒಂದು ಪದ್ಧತಿಯನ್ನು ನಮ್ಮ ರಾಜ್ಯಸರ್ಕಾರದ ಮೂಲೀಕತ್ವದಲ್ಲಿರುವಂತಹ ಕೈಗಾರಿಕೆಗಳಿಗೂ ಸಹ ಅನ್ವಯ ಮಾಡಲು ಏನು ಕಷ್ಟವಿದೆ?

ಶ್ರೀ ಆರ್. ಗುಂಡೂರಾವ್.—ಇಲ್ಲಿ ಕಷ್ಟಸಂಖದ ಪ್ರಶ್ನೆ ಏನೂ ಇಲ್ಲ. ಆ ತರಹದ ಸಲಹೆ ಇದ್ದರೆ ನೋಡೋಣ.

ಶ್ರೀ ಬಿ.ವಿ.ರಾಮಚಂದ್ರ ರೆಡ್ಡಿ.—ಈಗ ಎನ್.ಜಿ.ಇ.ಎಫ್.ನಲ್ಲಿ ರೆಕ್ರೂಟ್‌ಮೆಂಟ್ ನಡೆಯುತ್ತಿದೆ. ಈ ಕಾರ್ಖಾನೆಗಾಗಿ ಯಾರು ಜಮೀನು ಕಳೆದುಕೊಂಡರೋ, ಅವರು ಆ ಜಮೀನಿಗಾಗಿ ಪಡೆದುಕೊಂಡ ಪಣವನ್ನು ಸಹ ಖರ್ಚು ಮಾಡಿಕೊಂಡು ಈಗ ನಿರ್ಗತಿಕರಾಗಿದ್ದಾರೆ. ಮತ್ತು ಇಂತಹವರ ಮಕ್ಕಳು ಕೆಲಸವಿಲ್ಲದೆ ಪೋಲಿಗಳಾಗುತ್ತಿದ್ದಾರೆ. ಆದಕಾರಣ ಎಚ್.ಎ.ಎಲ್.ನಲ್ಲಿ ಇರುವಂತಹ ರೀತಿಯಲ್ಲಿ ಇಲ್ಲಿಯೂ ಸಹ ಜಮೀನು ಕಳೆದುಕೊಂಡವರ ಮಕ್ಕಳಿಗೆ ಕೆಲಸ ಕೊಡಬೇಕೆಂದು ತಾವು ಸಲಹೆ ನೀಡಿದರೆ, ಈ ಬಡ ಕುಟುಂಬಗಳಿಗೆ ಸಹಾಯವಾಗುತ್ತದೆ.

ಶ್ರೀ ಆರ್. ಗುಂಡೂರಾವ್.—ಇದು ಒಳ್ಳೆಯ ಸಲಹೆ, ಯೋಚನೆ ಮಾಡಬಹುದು.

Government First Grade College, Hebri

76. SRI A. G. KODGI (Baindur).— Will the Minister for Education be pleased to state :

(a) whether a First Grade Government College has been opened in Hebri of Dakshina Kannada District ;

(b) if so, whether adequate staff and other equipments are provided there ?

SRI G. B. SHANKARA RAO (Minister for Education).—

(a) Yes.

(b) Yes.